**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪಿರಿಯಾಪಟ್ಟಣ.**

**ಸಿ.ಸಿ. 1093/2019**

| | | |
|---|---|---|
| ಆರೋಪಿ/ಸಾಕ್ಷಿಯ ಹೆಸರುಃ | ಮಹದೇವ | DW-1 |
| ತಂದೆಯ ಹೆಸರುಃ | ಸಣ್ಣತಮ್ಮೇಗೌಡ | |
| ವಯಸ್ಸುಃ | 56 ವರ್ಷ | ಪ್ರಮಾಣೀಕರಿಸಿದ ದಿಃ 29/04/2025 |
| ಉದ್ಯೋಗಃ | ವ್ಯವಸಾಯ | |
| ವಾಸಸ್ಥಳಃ | ರಾಮನಾಥತುಂಗ ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು | |

**ಮುಖ್ಯ ವಿಚಾರಣೆಃ** ಆರೋಪಿತರ ಪರ ವಕೀಲ**ರಿಂದಃ**

2009 ರಿಂದ ಪಿರ್ಯಾದುದಾರರು ನನಗೆ ಗೊತ್ತು. ದಿಃ25/07/2011 ರಂದು ಪಿರ್ಯಾದುದಾರರಿಂದ ಮೂರು ಲಕ್ಷ ಹಣ ಸಾಲವಾಗಿ ಪಡೆದಿದ್ದೆ. ಅದಕ್ಕೆ ಶೇ.4 ರಷ್ಟು ಬಡ್ಡಿ ಮಾತನಾಡಿದ್ದರು. ದಿಃ17/04/2013 ರಂದು ಪಿರ್ಯಾದುದಾರರಿಗೆ ಎರಡು ಲಕ್ಷ ರೂಪಾಯಿ, ದಿಃ14/05/2013 ರಂದು ಎಪ್ಪತ್ತು ಸಾವಿರ ರೂಪಾಯಿ, ಅದೇ ತಿಂಗಳಿನಲ್ಲಿ ಪುನಃ ಐವತ್ತು ಸಾವಿರ ರೂಪಾಯಿ, ಜೂನ್ ನಲ್ಲಿ ನಲವತ್ತು ಸಾವಿರ ರೂಪಾಯಿ, ಜುಲೈನಲ್ಲಿ ಮುವತ್ತು ಸಾವಿರ ರೂಪಾಯಿ ಹಣವನ್ನು ನೀಡಿದ್ದೆ. ಒಟ್ಟು ರೂ.3,90,000/- ಹಣವನ್ನು ಪಿರ್ಯಾದುದಾರರಿಗೆ ಮರು ಪಾವತಿಸಿದ್ದೆ.

2. ದಿಃ04/09/2011 ರಂದು ಪಿರ್ಯಾದುದಾರರಿಂದ ಒಂದೂವರೆ ಲಕ್ಷ ರೂಪಾಯಿ ಹಣವನ್ನು ಪಡೆದಿದ್ದೆ. ತಿಂಗಳಿಗೆ ಶೇ.5 ರಂತೆ ಬಡ್ಡಿ ಮಾತನಾಡಿದ್ದೆವು. ಹಳೆಯ ಸಾಲಕ್ಕೆ ಪಡೆದಿದ್ದ ಉಳಿಕೆ ಬಡ್ಡಿ ಮತ್ತು ಪುನಃ ಪಡೆದಿದ್ದ ಒಂದೂವರೆ ಲಕ್ಷ ಹಾಗೂ ಬಡ್ಡಿ ಸೇರಿಸಿ ಒಟ್ಟು ರೂ.6,50,000/- ಹಣವನ್ನು ಪಾವತಿಸಿದ್ದೆ. ಸಾಕ್ಷಿ 4 ಪೇಪರ್ ನ ಮೇಲೆ ಬರೆದಿರುವ

ದಾಖಲಾತಿಗಳನ್ನು ನೀಡಿದ್ದು, ಅವುಗಳನ್ನು **ನಿಡಿ.1** ರಿಂದ **4** ಎಂದು ಗುರುತಿಸಲಾಯಿತು. ಪಿರ್ಯಾದುದಾರರೇ ತಮ್ಮ ಸ್ವ ಹಸ್ತಾಕ್ಷರದಿಂದ ನಿಡಿ.1 ರಿಂದ 4 ನ್ನು ಬರೆದುಕೊಟ್ಟಿರುತ್ತಾರೆ. ಅದರ ಮೇಲೆ ಪಿರ್ಯಾದುದಾರರು ಸಹಿ ಮಾಡಿದ್ದಾರೆ. (ಸದರಿ ದಾಖಲೆಗಳನ್ನು ಗುರುತಿಸುವಾಗ ಪಿರ್ಯಾದುದಾರರ ಪರ ವಕೀಲರು ತಕರಾರು ಮಾಡಿರುತ್ತಾರೆ. ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.) ನಾನು ಮೇಲೆ ಹೇಳಿದ ಹಣವನ್ನು ಪಡೆದದ್ದು ಬಿಟ್ಟು ನಿಪಿ.1-ಚೆಕ್‌ನಲ್ಲಿ ನಮೂದಿಸಿರುವಂತಹ ಹಣವನ್ನು ಪಡೆದಿಲ್ಲ.

3. ನಾನು ಪಿರ್ಯಾದುದಾರರೊಂದಿಗೆ ವ್ಯವಹರಿಸುವಾಗ ನನ್ನ ಬ್ಯಾಂಕ್ ನ ಹೆಸರು Cauvery Grameena Bank ಎಂದು ಇತ್ತು. ನಂತರ Kaveri Grameena Bank ಎಂದು, ಆನಂತರ Kaveri Kalpatharu Grameena Bank ಎಂದು ಆಯಿತು. ಈಗ Karnataka Kaveri Grameena Bank ಎಂದು ಆಗಿದೆ. ನಾನು ಪಿರ್ಯಾದುದಾರರಿಗೆ ಕೊಟ್ಟಂತಹ ಚೆಕ್ 2010 ರಲ್ಲೇ ರದ್ದಾಗಿತ್ತು. ನಿಪಿ.1 ರಲ್ಲಿರುವ ಸಹಿ ಮತ್ತು ಬರವಣಿಗೆ ನನ್ನದಲ್ಲ. ನನ್ನ ಖಾತೆ ಕಂಪಲಾಪುರದ ಕಾವೇರಿ ಗ್ರಾಮೀಣ ಬ್ಯಾಂಕ್ ನಲ್ಲಿದೆ. ನಿಪಿ.1 ನ್ನು ನನ್ನ ಬ್ಯಾಂಕಿನ ಶಾಖೆಗೆ ನಗದೀಕರಣಕ್ಕೆ ಕಳುಹಿಸಿಲ್ಲ. ಆದರೆ ಪಿರಿಯಾಪಟ್ಟಣ ಬ್ಯಾಂಕಿಗೆ ಕಳುಹಿಸಿದ್ದಾರೆ. ನನ್ನ ರದ್ದಾಗಿರುವಂತಹ ಚೆಕ್ಕನ್ನು ಗೌರವಿಸಬಾರದು. ಪಿರ್ಯಾದುದಾರರು ಹಾಜರುಪಡಿಸಿರುವ ಮೆಮೋದಲ್ಲಿ ರೂ.50,000/- ಎಂದು ಬರೆಯಲಾಗಿದೆ. ಪಿರ್ಯಾದುದಾರರು ಹಾಜರುಪಡಿಸಿರುವ ದಾಖಲಾತಿಗಳು ಸುಳ್ಳು ದಾಖಲಾತಿಗಳು. ನಾನು ಪಿರ್ಯಾದುದಾರರಿಗೆ ಯಾವುದೇ ಸಾಲದ ಮೊತ್ತವನ್ನು ನೀಡುವಂತಿಲ್ಲ. ಆದ್ದರಿಂದ ಪಿರ್ಯಾದನ್ನು ವಜಾಗೊಳಿಸಿ, ನನ್ನನ್ನು ಮುಕ್ತನನ್ನಾಗಿಸಲು ಕೋರುತ್ತೇನೆ.

(ಮುಂದುವರೆದ ಮುಖ್ಯ ವಿಚಾರಣೆಯನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.